ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಭಾರಿ ಮಳೆಯಿಂದ ಹಾಸನ ಜಿಲ್ಲೆಯಲ್ಲಿ ಉಂಟಾಗಿರುವ ನಷ್ಟಗಳ ಕುರಿತು

ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

281 (357) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2019-2020 ಮತ್ತು 2020-2021ನೇ ಸಾಲಿನಲ್ಲಿ ಸುರಿದ ಭಾರಿ ಮಳೆಯಿಂದ ಹಾಸನ ಜಿಲ್ಲೆಯಲ್ಲಿ ಉಂಟಾಗಿರುವ ಭೂ ಕುಸಿತ, ರಸ್ತೆ ಹಾನಿ, ಬೆಳೆ ಹಾನಿ, ಪ್ರಾಣ ಹಾನಿ ಪ್ರಕರಣಗಳೆಷ್ಟು; ಈ ಪ್ರಕರಣಗಳಿಂದ ಉಂಟಾಗಿರುವ ನಷ್ಟದ ಅಂದಾಜು ಮೊತ್ತವೆಷ್ಟು ; (ಪ್ರಕರಣವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಆ) ಆಸ್ತಿ ಹಾನಿ, ಬೆಳೆ ಹಾನಿ, ಪ್ರಾಣ ಹಾನಿಯಿಂದ ಉಂಟಾಗಿರುವ ನಷ್ಟಗಳನ್ನು ಸಂತ್ರಸ್ಥರಿಗೆ ಭರಿಸಲು ಸರ್ಕಾರವು ನಿಗದಿಪಡಿಸಿರುವ ಪರಿಹಾರದ ಮೊತ್ತವೆಷ್ಟು ; ಈ ಪ್ರಕರಣಗಳಲ್ಲಿ ಹಾಸನ ಜಿಲ್ಲೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು ; ಸಂತ್ರಸ್ಥರಿಗೆ ಇದುವರೆಗು ನೀಡಿದ ಪರಿಹಾರವೆಷ್ಟು ; (ಪ್ರಕರಣವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಪ್ರಕೃತಿ ವಿಕೋಪದಿಂದ ಹಾನಿಯನ್ನು ಪರಿಶೀಲಿಸಲು ನೇಮಕ ಮಾಡಿರುವ ಪರಿಣಿತರು ಯಾರ್ಯಾರು ? (ಪರಿಣಿತರ ತಂಡಗಳ ವಿವರ ಹಾಗೂ ಇವರು ನೀಡಿರುವ ವರದಿಯ ವಿವರಗಳನ್ನು ಒದಗಿಸುವುದು)